**RW-4**

**ದಿನಾಂಕ 30.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಶ್ರೀ ಕೆ ಬಿ ವಕೀಲರಿಂದ 4 ಮತ್ತು 5 ನೇ ಎದುರುದಾರರ ಪರವಾಗಿ :-.**

ರತ್ನಮ್ಮರವರು ಸಾಯುವ ಮೊದಲು 8-10 ವರ್ಷ ಅವರ ದೇಹಾರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಕಳೆದ 3-4 ವರ್ಷ ಮನಸ್ಥಿತಿ ಸರಿಯಿರಲಿಲ್ಲ ಮತ್ತು ಯೋಚನೆ ಮಾಡುವ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಮನೆ ಬಿಟ್ಟು ಆಚೆ ಬರುತ್ತಿರಲಿಲ್ಲ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ಅವರಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರು ಸಹಿ ಮಾಡುತ್ತಿದ್ದರು. ದಿಃ 13.07.2021 ರ ವಿಲ್ ಅನ್ನು ರತ್ನಮ್ಮ ಬರೆದುಕೊಟ್ಟಿಲ್ಲ, ನಾನೇ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರ ಬರೆದಿರುವ ವಿಚಾರಗಳು ಯಾವುದೂ ಸಹ ಅವರಿಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ವಿಲ್ ಮೇಲಿರುವ ಹೆಬ್ಬೆಟ್ಟು ಮತ್ತು ಸಹಿ ರತ್ನಮ್ಮರವರದ್ದಲ್ಲ ಎಂದರೆ ಸರಿಯಲ್ಲ. ನಾನೇ ಆ ವಿಲ್ ಅನ್ನು ಸೃಷ್ಟಿ ಮಾಡಿ ಅವರ ಫೋಟೋ ಅಂಟಿಸಿ ನೋಟರಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಅವರು ಖುದ್ದಾಗಿ ವಿಲ್ ಬರೆದುಕೊಟ್ಟಿಲ್ಲ, ನಾನೇ ಅದನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಿಪಿ 4 ವಿಲ್ ಆಧಾರದ ಮೇಲೆ ನನಗೆ ಯಾವುದೇ ಆಸ್ತಿಯ ಮೇಲೆ ಅಧಿಕಾರ ಬರುವುದಿಲ್ಲ ಎಂದರೆ ಸರಿಯಲ್ಲ.

ಉಳಿದ ಎದುರುದಾರರ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಬಿ. ಎಸ್. ಭಾರತಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**